ಮಂತ್ರು ಹರಪನಹಳ್ಳಿ ಮುನಿಸಿಫ್ ಕೋರ್ಟಿನಿಂದ ತಡೆಯಾಜ್ಞೆ ಬಂದಿದ್ದರಿಂದ ಮುಂದಿನ ಕ್ರಮ ತೆಗೆದು ಕೊಳ್ಳಲು ಸಾಧ್ಯವಾಗಲಿಲ್ಲ.

ಉ) ಒಂದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ ರಾಚಯ್ಯ (ಗೃಹ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳ ಪೆಸರಿನಲ್ಲಿರತಕ್ಕ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧) ೧೯೬೪ನೇ ಇಸವಿಯ ಕರ್ನಾಟಕ ಭೂ ಕಂದಾಯ ಶಾಸನದ ೧೯೪(೨)ನೇ ಕಲಮಿನ ಮೇರೆಗೆ ಹಿರೇಕೆರೂರು ತಾಲ್ಲೂಕಿನ ೬೦ ಗ್ರಾಮಗಳಿಗೆ ೧೯೮೦–೮೧ನೇ ಸಾಲಿನಲ್ಲಿ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೦ನೇ ಆಕ್ಟೋಬರ್ ೧೯೮೬ರಂದು ಹೊರಡಿಸಲಾದ ಆರ್.ಡಿ. ೧೭೧ ಟಿಆರ್ಎಂ ೮೬ನೇ ಕ್ರಮಾಂಕದ ಅಧಿಸೂಚನೆ.

೨) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ೯೫ ಗ್ರಾಮಗಳಿಗೆ ೧೯೮೦–೮೧ನೇ ಸಾಲಿನಲ್ಲಿ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೬ನೇ ಡಿಸೆಂಬರ್, ೧೯೮೬ರಂದು ಹೊರಡಿಸಲಾದ ಆರ್ ಡಿ ೧೭೦ ಟಿ.ಆರ್.ಎಂ. ೮೬ನೇ ಕ್ರಮಾಂಕದ ಅಧಿಸೂಚನೆ, ಹಾಗೂ

೩) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ೨ ಗ್ರಾಮಗಳಿಗೆ ೧೯೮೪–೮೫ನೇ ಸಾಲಿನಲ್ಲಿ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೪ನೇ ಫೆಬ್ರುವರಿ, ೧೯೮೭ರಂದು ಹೊರಡಿಸಲಾದ ಆರ್.ಡಿ. ೬೧ ಟಿ ಆರ್.ಎಂ. ೮೫ನೇ ಕ್ರಮಾಂಕದ ಅಧಿಸೂಚನೆ.

ಅಧ್ಯಕ್ಷರು.— ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ವರದಿಗಳನ್ನೊಪ್ಪಿಸುವುದು

ಶ್ರೀ ಮೊಹಮದ್ ಮೊಯಿನುದ್ದೀನ್.— ೧೯೭೬–೭೭ ಹಾಗೂ ೧೯೭೫–೭೯ ಮತ್ತು ೧೯೮೨–೮೩ನೇ ಸಾಲಿನ ಭಾರತದ ಆಡಿಟರ್ ಮತ್ತು ಕಂಟ್ರೋಲರ್‌ರವರ ವರದಿಯಲ್ಲಿ ಮೈಸೂರು ಮಿನರಲ್ಸ್‌ನವರ ಮೇಲೆ ಮಾಡಿದ ವ್ಯಾಖ್ಯಾನಗಳನ್ನು ಕುರಿತು ಸಾರ್ವಜನಿಕ ಉದ್ಯಮಗಳ ಸಮಿತಿಯ ವರದಿ ಹಾಗೂ ಮೈಸೂರು ಮಿನರಲ್ಸ್ ಬಗ್ಗೆ ಸಾರ್ವಜನಿಕ ಉದ್ಯಮಗಳ ಸಮಿತಿಯ ೨೬ನೇ ವರದಿಯನ್ನು ಸಭೆಯ ಮುಂದೆ ಇಡಲಾಯಿತು,

ಅಧ್ಯಕ್ಷರು.— ವರದಿಗಳನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಯಮಕನ ಮರ್ಡಿ ಸಿ.ಇ.ಎಸ್. ಸೊಸೈಟಿ ವತಿಯಿಂದ ಕಿರಿಯ ಕಾಲೇಜು ಪ್ರಾರಂಭಿಸುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

ಶ್ರೀ ಕೆ. ಕುಶಾಲ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಕೊಡಿಯಾಲ ಗ್ರಾಮದ ಕಲ್ಬಡ ಹರಿಜನ ಕಾಲೋನಿಯ ರಸ್ತೆಯನ್ನು ದುರಸ್ತಿ ಮಾಡಿ ಡಾಂಬರೀಕರಣದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.— ಅರ್ಜಿಯನ್ನು ಒಪ್ಪಿಸಲಾಯಿತು.